# ಮಸಾಯಿ

ಕೀನ್ಯಾ ಮತ್ತು ತಾಂಜೇನಿಯಾದಲ್ಲಿನ ಮಸಾಯಿಗಳು ದಿನದಿನದ ಬದುಕಿನಲ್ಲಿ ಮುಗ್ಧರು; ಹೋರಾಟಕ್ಕೆ ನಿಂತರೆ ವೀರರು. 'ಸಿಂಹ ನಮಗಿಂತ ವೇಗವಾಗಿ ಓಡಬಹುದು; ಆದರೆ ನಾವು ಸಿಂಹಕ್ಕಿಂತ ದೂರ ಓಡಬಲ್ಲೆವು' – ಇದು ಮಸಾಯಿ ಹುಡುಗನೊಬ್ಬನ ಮಾತು. ಅಂದಹಾಗೆ ಅವರು ಸಿಂಹದಿಂದ ತಪ್ಪಿಸಿಕೊಂಡು ಓಡುವವರಲ್ಲ; ಸಿಂಹದ ಬೆನ್ನತ್ತಿಹೋಗಿ ಬೇಟೆಯಾಡುವವರು!

ಮಸಾಯಿಗಳ ಮೂಲ ಯಾವುದು ಎಂಬ ಕುರಿತು ಖಚಿತವಾದ ದಾಖಲೆ ಇಲ್ಲ. ಜಾನಪದದ ಪ್ರಕಾರ ಕೀನ್ಯಾದ ವಾಯುವ್ಯಭಾಗದಲ್ಲಿರುವ ತುರ್ಕನಾ ಸರೋವರದ ಅಂಚಿನ ಕಣಿವೆಯೇ ಇವರ ಮೂಲ. 15ನೇ ಶತಮಾನದ ಆಸುಪಾಸಿನಲ್ಲಿ ಅಲ್ಲಿಂದ ವಲಸೆ ಹೋಗಲಾರಂಭಿಸಿದ ಮಸಾಯಿಗಳು ಬೇರೆ ಬೇರೆ ಜಾಗಗಳಲ್ಲಿ ಹೋಗಿ ನೆಲೆಸಿದರು. 17–18ನೇ ಶತಮಾನದ ಆಸುಪಾಸಿನಲ್ಲಿ ತಾಂಜೇನಿಯಾಕ್ಕೂ ಬಂದರು.

ಮಸಾಯಿಗಳದ್ದು ಸಂಪೂರ್ಣ ಪುರುಷಪ್ರಧಾನ ಸಮುದಾಯ. ಸಮುದಾಯದ ಎಲ್ಲ ಮುಖ್ಯ ನಿರ್ಧಾರಗಳನ್ನು ಹಿರಿಯ ಪುರುಷರೇ ತೆಗೆದುಕೊಳ್ಳುತ್ತಾರೆ. ವ್ಯಾಜ್ಯಗಳನ್ನು ಬಗೆಹರಿಸಲು ಪಂಚಾಯ್ತಿ ಮಾದರಿಯ ವ್ಯವಸ್ಥೆಯೂ ಇದೆ.



ಅದನ್ನು ಅಮಿಟು ಎಂದು ಕರೆಯಲಾಗುತ್ತದೆ. ಏಕದೇವತಾರಾಧಕರಾದ ಅವರು ಪೂಜಿಸುವ ದೇವರನ್ನು 'ಎನ್ಕಾಯ್' ಅಥವಾ 'ಎಂಘಾಯ್' ಎಂದು ಕರೆಯಲಾಗುತ್ತದೆ. ಆ ದೇವರಿಗೆ ಮುಖ್ಯವಾಗಿ ಎರಡು ಗುಣಗಳಿವೆ. ಒಂದು ಎಂಘಾಯ್ ನ್ಯಾರೊಕ್ (ಪರೋಪಕಾರ) ಇನ್ನೊಂದು ಎಂಘಾಯ್ ನಾ–ನ್ಯಾಕೀ (ಪ್ರತೀಕಾರ). ಈ ಎರಡು ಗುಣಗಳು ಆ ಸಮುದಾಯದ ಜನರ ಮುಖ್ಯ ಗುಣಗಳೂ ಹೌದು.

ಮಸಾಯಿಗಳು 'ಮಾ' ಎಂಬ ಭಾಷೆಯನ್ನು ಮಾತಾಡುತ್ತಾರೆ. ಕೀನ್ಯಾ ದೇಶದಲ್ಲಿ 1989ರಲ್ಲಿ 3,77,089 ಜನರು ಇದ್ದರು. 2019ರ ಗಣತಿಯ ಪ್ರಕಾರ ಕೀನ್ಯಾದಲ್ಲಿನ ಮಸಾಯಿಗಳ ಜನಸಂಖ್ಯೆ 10,89,000.



# ಮಾವೊರಿ

ನ್ಯೂಜಿಲೆಂಡ್‌ನ ವಿಶಿಷ್ಟ ಬುಡಕಟ್ಟು ಸಮುದಾಯ ಮಾವೊರಿ. ತಮ್ಮದೇ ಆದ ಸಂಸ್ಕೃತಿ, ಪುರಾಣಕಥೆಗಳು, ದಿರಿಸುಗಳನ್ನು ಹೊಂದಿರುವ ಇವರು, 'ಹಕ' ಎನ್ನುವ ಕಲಾಪ್ರಕಾರಕ್ಕೆ ಹೆಸರುವಾಸಿ. ನಾಲಿಗೆಯನ್ನು ವಿಚಿತ್ರವಾಗಿ ಹೊರಚಾಚಿ ಕೈಕಾಲುಗಳನ್ನು ಬಡಿದುಕೊಳ್ಳುತ್ತ ಎದುರಾಳಿಗಳನ್ನು ಕೆಣಕುವುದು, ಹೆದರಿಸುವ ಕಲಾಪ್ರಕಾರವಿದು. ಇದು ಈಗ ಮಾವೊರಿ ಸಮುದಾಯವನ್ನು ಮೀರಿ ನ್ಯೂಜಿಲೆಂಡ್ ದೇಶದ ಗುರುತಾಗಿ ಮಾರ್ಪಟ್ಟಿದೆ. ಕ್ರೀಡಾಪಟುಗಳು ಕ್ರೀಡಾಂಗಣಗಳಲ್ಲಿ ಆಟಕ್ಕೂ ಮುನ್ನ ಇದನ್ನು ಬಳಸಿಕೊಳ್ಳುತ್ತಾರೆ. ಶಾಲಾ ಕಾಲೇಜುಗಳಲ್ಲಿಯೂ ಈ ಕಲಾಪ್ರಕಾರ ಬಲುಜನಪ್ರಿಯ. ಜೊತೆಗೆ ಮಾವೊರಿಗಳ ಹಚ್ಚೆಗಳೂ ಅಷ್ಟೇ ಜನಪ್ರಿಯ.

ಮೊದಲು ಈ ಸಮುದಾಯದವರು ಗ್ರೇಟ್ ಮಾವೊ ಹೆಸರಿನ ಪಕ್ಷಿಗಳನ್ನು ಬೇಟೆಯಾಡಿ ತಿನ್ನುತ್ತಿದ್ದರು. ಆ ಪಕ್ಷಿಪ್ರಭೇದ ಈಗ ಅಳಿದುಹೋಗಿದೆ.

17ನೇ ಶತಮಾನದಲ್ಲಿ ನ್ಯೂಜಿಲೆಂಡ್‌ಗೆ ಯೂರೋಪಿಯನ್ನರು ಬಂದ ಮೇಲೆ ಅವರ ಪ್ರಭಾವ ಮಾವೊರಿ ಸಮುದಾಯದ ಮೇಲೆ ಬಹಳವೇ ಆಗಿದೆ. ಈಗ ಇರುವ ಮಾವೊರಿ ಸಮುದಾಯ ಒಂದು ಬಗೆಯ ಯೂರೋಪಿಯನ್ ಮಿಶ್ರಿತ ಮಾವೊರಿ ಎನ್ನುವಷ್ಟು ಅವರ ಪ್ರಭಾವಕ್ಕೆ ಒಳಗಾಗಿದ್ದಾರೆ.

2018ರ ಗಣತಿಯ ಪ್ರಕಾರ 7,75,000 ಮಾವೊರಿಗಳು ನ್ಯೂಜಿಲೆಂಡ್‌ನಲ್ಲಿ ಇದ್ದಾರೆ. ಅದರಲ್ಲಿ 1,40,000ಕ್ಕೂ ಅಧಿಕ ಜನರು ಆಸ್ಟ್ರೇಲಿಯಾದಲ್ಲಿ ವಾಸಿಸುತ್ತಿದ್ದಾರೆ.

ನ್ಯೂಜಿಲೆಂಡ್‌ನ ಉಳಿದ ಸಮುದಾಯಗಳ ಜೀವನಮಟ್ಟಕ್ಕೆ ಹೋಲಿಸಿದರೆ ಮಾವೊರಿಗಳು ಬಡವರು. ಅನಕ್ಷರಸ್ಥರ ಸಂಖ್ಯೆ ಅವರಲ್ಲಿ ಹೆಚ್ಚಿದೆ. ತಮ್ಮ ಮೂಲಬೇರುಗಳ ಮೇಲೆ ಗಟ್ಟಿಯಾಗಿ ನಿಲ್ಲಲಾಗದೆ, ಆಧುನಿಕತೆಗೂ ಪೂರ್ತಿ ಒಗ್ಗಿಕೊಳ್ಳಲಾಗದ ಸಂದಿಗ್ಧದಲ್ಲಿ ಈ ಸಮುದಾಯದ ಹೆಚ್ಚಿನ ಜನರು ಅಪರಾಧಗಳಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ನ್ಯೂಜಿಲೆಂಡಿಗರಿಗೂ ಮಾವೊರಿಗಳಿಗೂ ಇರುವ ಸಾಂಸ್ಕೃತಿಕ ಅಂತರವನ್ನು ಕಡಿಮೆಗೊಳಿಸಿ ಅವರನ್ನು ಮುಖ್ಯವಾಹಿನಿಗೆ ತರುವ ಪ್ರಯತ್ನಗಳೂ ಸಾಕಷ್ಟು ನಡೆಯುತ್ತಿವೆ.

ಚಿತ್ರಗಳ ಕೃಪೆ: ಅಂತರ್ಜಾಲ